ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 25-12-69.

## *ಅನಾಸಕ್ತರಾಗಲು ತನು-ಮನವನ್ನು ತಂದೆಯ ಆಸ್ತಿಯೆಂದು ತಿಳಿಯಿರಿ*

(अनासक्त बनने के लिए तन और मन को अमानत समझो)

ಬಾಪ್ ದಾದಾ ಅವರನ್ನು ಎಲ್ಲಿ ಹಾಗು ಏಕೆ ಕರೆದಿದ್ದೀರಿ? ಈಗ ಎಲ್ಲಿ ಕುಳಿತುಕೊಂಡಿದ್ದೀರಿ? ಮಧುಬನದಲ್ಲಿದ್ದೀರಿ ಆದರೆ ಮಧುಬನದಲ್ಲಿಯೂ ತಂದೆ ಎಲ್ಲಿ ಬಂದಿದ್ದಾರೆ? ಹೂಬನದಲ್ಲಿಯೋ ಅಥವಾ ಸಭೆಯಲ್ಲಿಯೋ? ಬಾಪ್ ದಾದಾ ಆತ್ಮರನ್ನು ನೋಡುತ್ತಿದ್ದಾರೆ ಜೊತೆಜೊತೆಗೆ ಪ್ರತಿಯೊಂದು ಹೂವಿನಿಂದ ಹೊಮ್ಮುವ ಆತ್ಮದ ಸುಗಂಧವನ್ನು ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ಜನ ಹೇಗೆ ಹೂವಿನ (essence) ಸಾರವನ್ನು ತೆಗೆದು ಅದಕ್ಕೆ ಸುಗಂಧ ದ್ರವ್ಯ ಎನ್ನುತ್ತಾರೆ. ಅದರ ಸುಗಂಧ ಮಧುರವಾಗಿರುತ್ತದೆ. ಇಂದು ಮಧುಬನದಲ್ಲಿ ಇರುತ್ತಲೂ ಆತ್ಮಿಕ ಜಗತ್ತಿನಲ್ಲಿ ಸುತ್ತಾಡುತ್ತಿದ್ದೇವೆ. ತಾವೆಲ್ಲರೂ ಆತ್ಮಿಕ ರೂಪದಲ್ಲಿದ್ದು ಪ್ರತಿಯೊಂದು ಕರ್ಮವನ್ನು ಮಾಡಿದಾಗ ಸೇವೆಯಲ್ಲಿ ಅಥವಾ ಕರ್ಮದಲ್ಲಿ ಶೋಭೆ ಬರುತ್ತದೆ. ಈಗ ನವೀನತೆ ಬಯಸುತ್ತೀರಲ್ಲವೇ ಅಥವಾ ಹೇಗೆ ನಡೆಯುತ್ತಿದೆಯೋ ಅದರಲ್ಲಿ ಸಂತುಷ್ಟರಾಗಿರುವಿರೋ? ಪ್ರತಿಯೊಂದು ಕರ್ಮದಲ್ಲಿ, ಸಂಕಲ್ಪದಲ್ಲಿ, ವಾಣಿಯಲ್ಲಿ ಆತ್ಮೀಯತೆಯಿದ್ದಾಗಲೇ ಶೋಭೆ ಬರುವುದು. ಆತ್ಮೀಯತೆ ಹೇಗೆ ಬರುವುದು? ಆತ್ಮೀಯತೆ ಸದಾಕಾಲ ಇರಲು ಏನು ಮಾಡಬೇಕು? ಏನನ್ನು ಬದಲಿಸಬೇಕು? (ಎಲ್ಲರೂ ಭಿನ್ನ ಭಿನ್ನ ಮಾತುಗಳನ್ನು ಹೇಳಿದರು) ಎಲ್ಲರಿಗೂ ಪಕ್ಕಾ ಆಗಿರುವ ಮುಖ್ಯ ಮಾತುಗಳು ಇವಾಗಿವೆ. ಆದರೆ ಆತ್ಮೀಯತೆ ಇಲ್ಲದಿರಲಿಕ್ಕೆ ಕಾರಣವೇನು? ಪ್ರಾಮಾಣಿಕ, ಆಜ್ಞಾಪಾಲಕರು ಏಕೆ ಆಗುವುದಿಲ್ಲ? (ಸಂಬಂಧದ ಕೊರತೆ) ಸಂಬಂಧದಲ್ಲಿ ಏಕೆ ಕೊರತೆ ಬರುತ್ತದೆ? ನಿಶ್ಚಯಬುದ್ಧಿಯ ತಿಲಕ ಎಲ್ಲರಿಗೂ ಹಚ್ಚಲ್ಪಟ್ಟಿದೆ. ಆತ್ಮೀಯತೆ ಸದಾಕಾಲಕ್ಕೂ ಏಕೆ ಇರುವುದಿಲ್ಲ? ಸದಾ ಇರದೇ ಇರಲಿಕ್ಕೆ ಕಾರಣವಾಗಿದೆ ತಮ್ಮನ್ನು ಮತ್ತು ಯಾರು ಸೇವೆಗೆ ನಿಮಿತ್ತರಾಗಿರುವಿರೋ ಅವರನ್ನು ತಂದೆಯವರ ಸ್ವತ್ತು (ಅಮಾನತ್) ಎಂದು ತಿಳಿಯುವುದಿಲ್ಲ. ಎಷ್ಟು ತಮ್ಮನ್ನು ಮತ್ತು ಇತರರನ್ನು ತಂದೆಯ ಆಸ್ತಿ ಎಂದು ತಿಳಿಯುತ್ತಿರೋ ಅಷ್ಟು ಆತ್ಮೀಯತೆ ಬರುತ್ತದೆ. ತಂದೆಯ ಆಸ್ತಿ ಎಂದು ತಿಳಿಯದೆ ಇದ್ದಾಗ ಯಾವುದಾದರೂ ಒಂದು ಲೋಪ ಬಂದುಬಿಡುತ್ತದೆ ಮನಸ್ಸಿನ ಸಂಕಲ್ಪಗಳನ್ನು ಸಹ ಮನಸ್ಸನ್ನು ತಂದೆಯ ಆಸ್ತಿಯೆಂದು ತಿಳಿದು ಇದರಲ್ಲಿ ನನ್ನದು ಎಂಬ ಭಾವನೆಯನ್ನು ಬೆರೆಸಬಾರದು ಇವರನ್ನೇ ಬೇರೆ ಶಬ್ದಗಳಲ್ಲಿ ತಾವು ನಿಮಿತ್ತ(ಟ್ರಸ್ಟಿ) ಎಂದು ಕರೆಯುತ್ತಿರುವಿರಿ. ಆದರೆ ನಿಮಿತ್ತ ರೂಪದಲ್ಲಿ ಸಿಕ್ಕಂತಹ ತಮ್ಮ ತನು, ಮನ ಮತ್ತು ಜಿಜ್ಞಾಸು, ಸೇವಾಕೇಂದ್ರ ಅಥವಾ ಸ್ಥೂಲವಾಗಿ ದೊರೆತಂತಹ ಯಾವುದೇ ವಸ್ತುಗಳೆಲ್ಲವೂ ತಂದೆಯ ಸ್ವತ್ತಾಗಿದೆ ಎಂದು ತಿಳಿದಾಗ ಅನಾಸಕ್ತರಾಗುವಿರಿ. ಬುದ್ಧಿ ಹೋಗುವುದಿಲ್ಲ. ಅನಾಸಕ್ತರಾಗುವುದರಿಂದ ಆತ್ಮೀಯತೆ ಬರುವುದು. ತಾವು ಇಷ್ಟು ದೀಪಕ್ಕೆ ಅರ್ಪಣೆಯಾಗಬೇಕು. ಎಷ್ಟರವರೆಗೆ ಅರ್ಪಣೆ ಯಾಗಬೇಕು ಎಂದರೆ ಇವು ನನ್ನ ಸಂಸ್ಕಾರಗಳು, ಈ "ನನ್ನ ಸಂಸ್ಕಾರ" ಎಂಬ ಶಬ್ದ ಸಮಾಪ್ತಿಯಾಗಬೇಕು. ಅರ್ಪಣೆಯಾದ ಮೇಲೆ ನನ್ನ ಸಂಸ್ಕಾರ ಎಲ್ಲಿಂದ ಬಂತು? ನನ್ನ ಸಂಸ್ಕಾರದ ಕಾರಣದಿಂದಲೇ ಈ ಮಾತುಗಳು ಬರುತ್ತವೆ. ನಮ್ಮ ಸ್ವಭಾವ ಪರಿವರ್ತನೆ ಆಗುವಷ್ಟರವರೆಗೆ ಇದನ್ನು ಅಳಿಸಿಹಾಕಬೇಕು. ಎಲ್ಲರ ಸ್ವಭಾವ ಬದಲಾದಾಗ ಅವ್ಯಕ್ತ ಲಕ್ಷಣಗಳು ಕಂಡು ಬರುವವು. ಸಂಗಮಯುಗದ ಸಂಪೂರ್ಣ ಸ್ಥಿತಿಯ ಲಕ್ಷಣಗಳೇನು? ಫರಿಶ್ತೆಗಳಲ್ಲಿ ಯಾವ ವಿಶೇಷತೆಯಿರುತ್ತದೆ? ಒಂದು ಪೂರ್ಣ ಹಗುರತೆ (light) ಇರುತ್ತದೆ. ಆ ಕಾರಣ ಯಾವುದೇ ಪರಿಸ್ಥಿತಿಯಿದ್ದರೂ ಅದರಂತೆಯೇ ತಮ್ಮ ಸ್ಥಿತಿಯನ್ನು ತಯಾರು ಮಾಡಿಕೊಳ್ಳುತ್ತಾರೆ. ಯಾರು (ಸಂಸ್ಕಾರದಿಂದ) ಭಾರವಾಗಿರುವರೋ ಬಂದ ಪರಿಸ್ಥಿತಿಗಳಲ್ಲಿ ತಮ್ಮನ್ನು ತಾವು ಸ್ಥಿತಗೊಳಿಸಿಕೊಳ್ಳಲಾರರು. ಆದ್ದರಿಂದ ಸಂಕಲ್ಪ, ವಾಣಿ, ಕರ್ಮ ಮತ್ತು ಸಂಬಂಧಗಳಲ್ಲಿ ಹಗುರವಾಗಿರುವವರು, ಈಗ ನಿಮ್ಮನ್ನು ನೀವು ಈ ಎಲ್ಲಾ ಮಾತುಗಳಲ್ಲಿ ಎಷ್ಟು ಹಗುರವಾಗಿದ್ದೇವೆ ಎಂದು ಪರಿಶೀಲಿಸಿಕೊಳ್ಳಿರಿ. ಎಲ್ಲಾ ಮಾತುಗಳಲ್ಲಿ ಹಗುರರಾಗಿರುವುದು ಫರಿಶ್ತೆಗಳ

ಮುಖ್ಯ ವಿಶೇಷತೆಯಾಗಿದೆ. ಈ ನಾಲ್ಕು ಮಾತುಗಳಲ್ಲಿ ಹಗುರತೆ ಇದ್ದಾಗ ಫರಿಶ್ತೆಯ ಸ್ಥಿತಿಯಿರುವುದು ಎಲ್ಲಿಯವರೆಗೆ ಈ 4 ಮಾತುಗಳಲ್ಲಿ ಹಗುರತೆಯಿದೆಯೆಂಬುದನ್ನು ಈಗ ನೋಡಬೇಕಾಗಿದೆ. ಯಾರು ಹಗುರರಾಗಿರುತ್ತಾರೋ ಅವರು ಕ್ಷಣದಲ್ಲಿ ಯಾವುದೇ ಆತ್ಮನ ಸಂಸ್ಕಾರಗಳನ್ನೂ ಗುರುತಿಸಬಲ್ಲರು ಮತ್ತು ಯಾವುದೇ ಪರಿಸ್ಥಿತಿ ಬಂದರೂ ಒಂದು ಕ್ಷಣದಲ್ಲಿ ನಿರ್ಣಯ ತೆಗೆದುಕೊಳ್ಳಬಲ್ಲರು. ಇದಾಗಿದೆ ಫರಿಶ್ತೆಗಳ ಪರಿಶೀಲನೆ. ಯಾವಾಗ ಈ ಎಲ್ಲಾ ಗುಣಗಳು ಪ್ರತಿಯೊಂದು ಕರ್ಮದಲ್ಲಿ ಕಂಡುಬರುವವೋ ಆಗ ಸಂಪೂರ್ಣ ಸ್ಥಿತಿ ಸಮೀಪ ಬಂದಿದೆ ಎಂದು ತಿಳಿಯಬೇಕು. ಸಾಕಾರ ರೂಪದ ಸಂಪೂರ್ಣ ಸ್ಥಿತಿ ಯಾವ ಮಾತುಗಳಿಂದ ಕಂಡುಬರುತ್ತಿತ್ತು? ತಮ್ಮ ಸಂಪೂರ್ಣ ಸ್ಥಿತಿಯ ಪರಿಶೀಲನೆ ಈ ನಾಲ್ಕು ಮಾತುಗಳಿಂದ ತಾವೇ ಮಾಡಿಕೊಳ್ಳುವುದೇ ಮುಖ್ಯ ಮಾತಾಗಿದೆ.

ಈ ಗುಂಪಿನ ಮುಖ್ಯ ಗುಣ ಯಾವುದು? ಅದಾಗಿತ್ತು ಯಜ್ಞಸ್ನೇಹಿ ಗುಂಪು ಮತ್ತು ಇದಾಗಿದೆ ಯಜ್ಞಸಹಯೋಗಿ ಗುಂಪು, ಸಹಯೋಗಿಯಾಗುವುದರಲ್ಲಿ ಎಲ್ಲರೂ ಪಾಸಾಗಿದ್ದೀರಿ. ಇನ್ನೇನು ಮಾಡಬೇಕು? ಬೇರೆಯವರ ಮನಸ್ಸಿನಲ್ಲಿ ಬರುವ ಸಂಕಲ್ಪ ಮೊದಲೇ ತಮ್ಮ ಬಳಿ ಬರಬಹುದು. ಆಗ ಹೇಳುವ ಕೇಳುವ ಅವಶ್ಯಕತೆಯಿರುವುದಿಲ್ಲ. ಆದರೆ ಬೇರೆಯವರ ಸಂಕಲ್ಪಗಳನ್ನು ಓದಲು ತಮ್ಮ ಸಂಕಲ್ಪಗಳ ಮೇಲೆ ಸಂಪೂರ್ಣ ನಿಯಂತ್ರಣ (brake) ಇದ್ದಾಗ ಮಾತ್ರ ಸಾಧ್ಯ. ಬ್ರೇಕ್ ಶಕ್ತಿಶಾಲಿಯಾಗಿರಬೇಕು. ತಮ್ಮ ಸಂಕಲ್ಪಗಳನ್ನು ಸಮಾವೇಶಗೊಳಿಸಲು ಸಾಧ್ಯವಾಗದಿದ್ದರೆ ಬೇರೆಯವರ ಸಂಕಲ್ಪಗಳನ್ನು ಅರಿಯಲಾರಿರಿ, ಆದ್ದರಿಂದ ಸಂಕಲ್ಪಗಳನ್ನು ಸಮಾವೇಶಗೊಳಿಸಿಕೊಳ್ಳಿ ಎಂದು ಹೇಳಿದ್ದೆವು. ಎಷ್ಟೆಷ್ಟು ಸಂಕಲ್ಪಗಳನ್ನು ಸಮಾವೇಶಗೊಳಿಸುವ ಶಕ್ತಿಯಿರುವುದೋ ಅಷ್ಟಷ್ಟು ಬೇರೆಯವರ ಸಂಕಲ್ಪಗಳನ್ನು ತಿಳಿಯುವ ಶಕ್ತಿಯಿರುವುದು. ತಮ್ಮ ಸಂಕಲ್ಪಗಳ ವಿಸ್ತಾರದಲ್ಲಿ ಹೋಗುವುದರಿಂದ ತಮ್ಮನ್ನೇ ತಿಳಿದುಕೊಳ್ಳಲು ಆಗುವುದಿಲ್ಲ, ಬೇರೆಯವರನ್ನೇನು ತಿಳಿದುಕೊಳ್ಳುವಿರಿ. ಆದ್ದರಿಂದ ಈ ಸ್ಥಿತಿಯೂ ನಂಬರವಾರ್ ಪುರುಷಾರ್ಥದ ಅನುಸಾರವಾಗಿ ಬರುವುದು, ಎಲ್ಲಿಯವರೆಗೆ ಸಂಪೂರ್ಣ ಸ್ಥಿತಿಯ ಸಮೀಪಕ್ಕೆ ಬಂದಿದ್ದೇವೆ? ಎಂಬ ಸ್ಥಿತಿಯ ಪರೀಕ್ಷೆಯಿದಾಗಿದೆ. ಈ ಮಾತುಗಳಿಂದ ತಮ್ಮನ್ನು ತಾವೇ ಪರೀಕ್ಷೆ ಮಾಡಿಕೊಳ್ಳಬೇಕು.

ಇದು ಆಲ್ ರೌಂಡರ್ (ಎಲ್ಲ ತರಹದ ಸೇವೆ ಮಾಡುವ) ಗುಂಪಾಗಿದೆ. ಇವರ ಲಕ್ಷ್ಯವೇನು? ಲಕ್ಷಣವಿದೆ ಆದರೆ ಯಾವ ಲಕ್ಷ್ಯವಿದೆಯೋ ಅದಕ್ಕಿಂತ ಮುಂದಿನ ಲಕ್ಷ್ಯವನ್ನು ಇಟ್ಟುಕೊಳ್ಳಬೇಕು. ಇಲ್ಲಿಯವರೆಗೆ ಪ್ರಯೋಗದಲ್ಲಿರುವ ಲೆಕ್ಕದಂತೆ ಎಂತಹ ರಾಜರಲ್ಲಿ ಎಣಿಕೆಯಾಗುವಿರಿ? ಇಲ್ಲಿಯವರೆಗೆ ಮಾಡಿದ ಸೇವೆಯ ಪ್ರಮಾಣ ಎಂತಹ ರಾಜರಾಗುವಿರಿ? ಪುರುಷಾರ್ಥದಿಂದ ಪದವಿ ಸ್ಪಷ್ಟವಾಗುತ್ತದೆ. ಸೂರ್ಯವಂಶದವರಾಗುವಿರಿ ಆದರೆ ಒಬ್ಬರು ವಿಶ್ವಮಹಾರಾಜರು ಮತ್ತು ಇನ್ನೂ ಕೆಲವರು ತಮ್ಮ ರಾಜ್ಯದ ರಾಜರೂ ಆಗಿರುತ್ತಾರೆ. ಈಗ ಹೇಳಿ ತಾವು ಎಂತಹ ರಾಜರೆಂದು? ಆರಂಭದಲ್ಲಿ ಯಾರು ಬರುವರೆಂದು? ವಿಶ್ವದ ಮಹಾರಾಜರಾಗುವುದು ಮತ್ತು ಅವರಿಗೆ ಸಂಬಂಧಿಕರು ಆಗುವುದಕ್ಕೋಸ್ಕರ  ಯಾವ ಸಾಧನವಿದೆ? ವಿಶ್ವದ ಕಲ್ಯಾಣವಂತೂ ಆಗುವುದು ಆದರೆ ವಿಶ್ವ ಮಹಾರಾಜರಾಗುವವರ ಈಗಿನ ಲಕ್ಷಣಗಳೇನು? ಇದೂ ಬ್ರಾಹ್ಮಣರ ವಿಶ್ವವಾಗಿದೆ ಎಂದರೆ ಸಣ್ಣ ಸಂಸಾರವಾಗಿದೆ. ಯಾರು ವಿಶ್ವಮಹಾರಾಜರಾಗುವರೋ ಅವರ ಸಂಬಂಧ ಈ ವಿಶ್ವ ಎಂದರೆ ಬ್ರಾಹ್ಮಣ ಕುಲದ ಪ್ರತಿಯೊಂದು ಆತ್ಮದೊಂದಿಗೆ ಸಂಬಂಧವಿರುತ್ತದೆ. ಯಾರು ಇಲ್ಲಿ ಇಷ್ಟು ಸಣ್ಣ ಪರಿವಾರದಲ್ಲಿ, ಸರ್ವರ ಸಂಬಂಧದಲ್ಲಿ ಬರುವರೋ ಅವರು ಅಲ್ಲಿ ವಿಶ್ವಮಹಾರಾಜರಾಗುವರು. ಈಗ ಹೇಳಿ ಎಂತಹ ರಾಜರಾಗುವಿರಿ ? ಸ್ವಯಂ ಸಿಂಹಾಸನದ ಮೇಲೆ ಕುಳಿತುಕೊಳ್ಳುವವರು ಮತ್ತು ಇವರ ಸಮೀಪ ಸಹಯೋಗಿಗಳಾಗುವವರು (royal family), ಸಮೀಪದ ಸಹಯೋಗಿಗಳಾಗಲು ಸಹ ಈಗ ಏನು ಮಾಡಬೇಕು? ಪೂರ್ಣ ದೈವೀ ಪರಿವಾರಕ್ಕೆ, ಎಲ್ಲ ಆತ್ಮರಿಗೆ ಯಾವುದಾದರೂ ರೀತಿಯಿಂದ ಸಹಯೋಗಿಗಳಾಗಬೇಕು. ಒಂದಾಗಿದೆ ಇಡೀ ಕುಲದ ಸೇವೆಗೆ ನಿಮಿತ್ತರಾಗುವುದು, ಎರಡನೆಯದಾಗಿದೆ ಕೇವಲ ನಿಮಿತ್ತರಾಗುವುದು ಆದರೆ ಯಾವುದಾದರೂ ರೀತಿಯಿಂದ ಸರ್ವರ

ಸಹಯೋಗಿಯಾಗುವವರು ಅಲ್ಲಿಯೂ ಅವರ ಸಮೀಪದ ಸಹಯೋಗಿಗಳಾಗುವಿರಿ. ಈಗ ತಮ್ಮನ್ನು ತಾವು ನೋಡಿಕೊಳ್ಳಿ. ವಿಶ್ವ ಮಹಾರಾಜರಾಗುವಿರಲ್ಲವೇ? ಎಂತಹ ವಿಶ್ವಮಹಾರಾಜರಾಗುವಿರಿ ಎಂಬುದು ದಿನದಿನಕ್ಕೆ ಪ್ರತ್ಯಕ್ಷವಾಗುವುದನ್ನು ನೋಡುವಿರಿ. ಈಗ ಆಗುವುದಕ್ಕೆ ಸಾಧ್ಯವಿಲ್ಲವೆಂದಲ್ಲ. ಈಗಲೂ (makeup) ಕೊರತೆಗಳನ್ನು ತುಂಬಿಕೊಂಡು ಜಿಗಿಯಬಹುದು, ಆದರೆ ಸಮಯ ಕಡಿಮೆಯಿದೆ. ಆದ್ದರಿಂದ ವಿಶೇಷ ಪರಿಶ್ರಮ ಪಡಬೇಕು. ಆದರೆ ಅಸಾಧ್ಯವಲ್ಲ. ವಿಶ್ವಮಹಾರಾಜರ ಸಂಸ್ಕಾರಗಳೇನು? ಇಂದು ಬಾಪ್ ದಾದಾ ವಿಶ್ವ ಮಹಾರಾಜರಾಗುವ ಶಿಕ್ಷಣವನ್ನು ಕೊಡುತ್ತಿದ್ದಾರೆ. ಅವರ ಸಂಸ್ಕಾರಗಳೇನಾಗಿರುತ್ತವೆ? ತಂದೆ ಹೇಗೆ ಎಲ್ಲರ ಸ್ನೇಹಿ ಮತ್ತು ಸರ್ವರೂ ಅವರ ಸ್ನೇಹಿ. ಇದನ್ನು ಪ್ರಾಕ್ಟಿಕಲ್ ನಲ್ಲಿ ನೋಡಿದಿರಲ್ಲವೇ? ಹೀಗೆ ಒಬ್ಬೊಬ್ಬರಿಂದ ಅವರಿಗೆ ಸ್ನೇಹದ ಹೂಮಳೆಯಾಗುವುದು. ಯಾವಾಗ ಸ್ನೇಹದ ಹೂವುಗಳನ್ನು ಇಲ್ಲಿ ಹಾಕುವರೋ ಆಗ ಅಷ್ಟೇ ಜಡ ಚಿತ್ರಗಳ ಮೇಲೆಯೂ ಹೂಗಳನ್ನು ಹಾಕುವರು. ಈಗ ನನ್ನ ಮೇಲೆ ಎಷ್ಟು ಸ್ನೇಹ ಪುಷ್ಪದ ಮಳೆಯಾಗುತ್ತಿದೆ? ಎಂದು ಇಲ್ಲಿಯೂ ತಮ್ಮನ್ನು ನೋಡಿಕೊಳ್ಳಿ, ಅಂತಹವರು ಕಣ್ಮರೆ ಯಾಗಲಾರರು. ಇಲ್ಲಿ ಎಷ್ಟು ಸ್ನೇಹದ ಪುಷ್ಪಗಳೋ ಅಷ್ಟು ದ್ವಾಪರಯುಗದಲ್ಲಿ ಪೂಜೆ ಮಾಡುವಾಗ ಹೂಗಳನ್ನೂ ಹಾಕುವರು. ಹಲವೆಡೆ ಹೂ ಏರಿಸಲು ಒಮ್ಮೊಮ್ಮೆ ಮಂದಿರಕ್ಕೆ ಹೋಗುತ್ತಾರೆ. ಇನ್ನು ಕೆಲವು ಕಡೆಗೆ ದಿನವೂ ಹೂಮಳೆಯಾಗುತ್ತದೆ. ಇದರ ಕಾರಣವೇನು ಗೊತ್ತೇ? ಆದ್ದರಿಂದ ಎಲ್ಲರ ಸ್ನೇಹದ ಪುಷ್ಪಕ್ಕೆ ಯೋಗ್ಯರಾಗಬೇಕೆಂಬ ಲಕ್ಷ್ಯವನ್ನಿಟ್ಟುಕೊಳ್ಳಿ. ಸ್ನೇಹ ಹೇಗೆ ಸಿಗುತ್ತದೆ? ಒಬ್ಬೊಬ್ಬರಿಗೂ ತಮ್ಮ ಸಹಯೋಗ ಕೊಡುವುದರಿಂದ ಸಹಯೋಗ ಸಿಗುವುದು ಮತ್ತು ಇಲ್ಲಿ ಎಷ್ಟು ಜನರಿಗೆ ಸಹಯೋಗಿಯಾಗುವಿರೋ ಅಷ್ಟು ಅವರ ಸ್ನೇಹಕ್ಕೆ ಪಾತ್ರರಾಗುವಿರಿ ಮತ್ತು ವಿಶ್ವಮಹಾರಾಜರಾಗುವಿರಿ. ಆದ್ದರಿಂದ ಗುರಿ ದೊಡ್ಡದಿರಲಿ.

ಇಂದು ಒಂದು ಭಕ್ತಿಮಾರ್ಗದ ಚಿತ್ರ ನೆನಪಾಗುತ್ತಿದೆ. ನೋಡುತ್ತಾ ಮುಗುಳ್ನಗುತ್ತಿದ್ದೆವು. ಸಹಯೋಗದ ಬೆರಳನ್ನು ಕೊಡುವವರಾಗಿರುವಿರಲ್ಲವೇ? ಬೆರಳನ್ನು ಕೊಟ್ಟಿರುವಿರೋ ಅಥವಾ ಕೊಡಬೇಕೋ? ಎಲ್ಲಿಯವರೆಗೆ ಬೆರಳು ತಲುಪಿದೆ? ಬೆರಳು ಕೊಡಬೇಕಾಗಿದೆ ಎಂಬುದರ ಅರ್ಥವಾಗಿದೆ ಎಲ್ಲಿಯವರೆಗೆ ಬೆರಳು ತಲುಪಿದೆಯೋ ಅಲ್ಲಿಯವರೆಗೆ ಕೊಟ್ಟಿಲ್ಲ. ಬೆಟ್ಟ ಇನ್ನೂ ಎದ್ದಿಲ್ಲ. ಏಕೆ ಇಷ್ಟು ಭಾರವಾಗಿದೆ? ಇಷ್ಟು ಬೆರಳುಗಳು ಸಿಕ್ಕವು ಆದರೂ ಬೆಟ್ಟ ಇನ್ನೂ ಏಕೆ ಎದ್ದಿಲ್ಲ? ಕಲ್ಪದ ಹಿಂದಿನ ಸ್ಮೃತಿ ಚಿಹ್ನೆ ಏನಿದೆಯೋ ಅದು ಎಲ್ಲರ ಸಂಘಟಿತ ರೂಪದಲ್ಲಿ ಬಲ ಸಿಕ್ಕಾಗ ಸಫಲವಾಗಿತ್ತು. ಆದ್ದರಿಂದ ಬೆಟ್ಟ ಸ್ವಲ್ಪ ಏಳುತ್ತದೆ ಮತ್ತೆ ಕೂಡುತ್ತದೆ. ಪ್ರತಿಯೊಬ್ಬರೂ ತಮ್ಮ ಕೈಬೆರಳ ರೂಪದಲ್ಲಿ ಸಹಯೋಗವನ್ನು ಕೊಡುತ್ತಿದ್ದೀರಿ ಆದರೆ ಸಂಘಟಿತ ರೂಪದಲ್ಲಿ ಇದರ ಅವಶ್ಯಕತೆಯಿದೆ. ಸ್ವಯಂನ ಬೆರಳನ್ನು ಕೊಟ್ಟಿರುವಿರಿ ಆದರೆ ಯಾವಾಗ ಸಂಘಟಿತ ರೂಪದ ಬಲ ಸಿಗುವುದೋ ಆಗ ಸಂಘಟನೆಯಲ್ಲಿ ಶಕ್ತಿ ತುಂಬುವುದು. ಈಗ ಶಕ್ತಿದಳದ ಪ್ರತ್ಯಕ್ಷತೆ ಆಗಬೇಕಾಗಿದೆ. ಎಲ್ಲರೂ ಹೂಗಳಾಗಿದ್ದೀರಿ. ಆದರೆ ಈಗ ಹೂಗುಚ್ಛದಲ್ಲಿ ಸಂಘಟಿತ ರೂಪದಲ್ಲಿ ಬರಬೇಕು. ಈಗ ಕೆಲವು ಹೂಗಳು ಅಲ್ಲಲ್ಲಿ ತಮ್ಮ ರಂಗು, ಕೆಲವು ಸುಗಂಧ, ಕೆಲವು ರೂಪವನ್ನು ತೋರಿಸುತ್ತಿರುವವು. ಆದರೆ ರೂಪ, ರಂಗು, ಸುಗಂಧ ಎಲ್ಲವೂ ಯಾವಾಗ ಹೂಗುಚ್ಛದ ರೂಪದಲ್ಲಿ ಬರುವವೋ ಆಗ ಜಗತ್ತಿನ ಮುಂದೆ ಪ್ರತ್ಯಕ್ಷರಾಗುವಿರಿ. ಸಂಘಟಿತ ರೂಪದಲ್ಲಿ ಯಾವುದಾದರೊಂದು ನವೀನತೆ ಜಗತ್ತಿನ ಎದುರಿಗೆ ಬರುವಂತಹ ಯೋಜನೆ ಮಾಡಿ ತೋರಿಸಿ. ಒಬ್ಬೊಬ್ಬರು ಬೇರೆಯಾಗಿರುವ ಕಾರಣ ಪರಿಶ್ರಮ ಹೆಚ್ಚು ಮಾಡಬೇಕಾಗುತ್ತದೆ ಆದರೆ ಸಂಘಟನೆಯಲ್ಲಿ ಪರಿಶ್ರಮ ಕಡಿಮೆ ಸಫಲತೆ ಹೆಚ್ಚಿರುತ್ತದೆ. ಸಂಗಮಯುಗದ ಸಂಘಟನೆಯನ್ನು ಸಫಲಮಾಡಿದಾಗ ಸೇವೆಯಲ್ಲಿ ಸಫಲತೆ ಸಿಗುವುದು. ಎಲ್ಲ ಯೋಗ್ಯತೆಗಳಿವೆ ಆದರೆ ಯೋಜನೆಗಳಿಗೆ ಸೀಮಿತವಾಗಿವೆ. ಈಗ ತಮ್ಮ ಯೋಗ್ಯತೆಗಳಿಂದ ಬೇರೆಯವರನ್ನೂ ತಂದೆಯ ಸಮೀಪ ಬರಲು ಯೋಗ್ಯ ಮಾಡಿ.

ಆತ್ಮಗಳ ಸಂಬಂಧ ಜೋಡಿಸುವ ಅಡಿಪಾಯವನ್ನು ಹಾಕುವ ಗುಂಪು ಇದಾಗಿದೆ. ಹೇಗೆ ಅಡಿಪಾಯವನ್ನು ಹಾಕುವಿರೋ ಹಾಗೆಯೇ ಅವರ ಮುಂದಿನ ಜೀವನವಾಗುವುದು. ಎಲ್ಲ ಮಾತುಗಳಲ್ಲಿ ತಾವು ಎಷ್ಟು ಗಟ್ಟಿಯಾಗಿರುವಿರೋ ಅಷ್ಟೆ ಅನೇಕರ ಅಡಿಪಾಯ ಗಟ್ಟಿಯಾಗಿ ಹಾಕುವಿರಿ. ಎಷ್ಟು ತಮ್ಮಲ್ಲಿ ಸರ್ವ ಯೋಗ್ಯತೆಗಳಿರುವವೋ ಅಷ್ಟೇ ಗುಣಮಟ್ಟದವರಿರುವರು. ಒಂದು ವೇಳೆ ತಮ್ಮಲ್ಲಿ ಯೋಗ್ಯತೆಗಳು ಕಡಿಮೆಯಿದ್ದರೆ ಗುಣಮಟ್ಟವೂ ಕಡಿಮೆಯಿರುವುದು, ಆದ್ದರಿಂದ ನಾವೆಲ್ಲರೂ ಅಡಿಪಾಯ

ಹಾಕುವವರೆಂದು ತಿಳಿದುಕೊಳ್ಳಿ. ಬಾಪ್ ದಾದಾರವರ ಗುಣಗಳ ಸಮಾನತೆಯನ್ನು ತಮ್ಮಲ್ಲಿ ತಂದಾಗ ತಮ್ಮ ಸಮಾನರಾಗಿ ಮಾಡಿಕೊಳ್ಳುವಿರಿ. ಒಳ್ಳೆಯದು.

ಅವ್ಯಕ್ತ ಮುರಳಿ 25-12-1969.

***ಅನಾಸಕ್ತರಾಗಲು ತನು - ಮನವನ್ನು ತಂದೆಯ ಆಸ್ತಿ ಎಂದು ತಿಳಿಯಿರಿ***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಿ ಧಾರಣೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಆತ್ಮಿಕ ರೂಪದಲ್ಲಿದ್ದು ಪ್ರತಿಯೊಂದು ಕರ್ಮವನ್ನು ಮಾಡುತ್ತಿದ್ದೇನೆ.

2. ನಾನು ನನ್ನನ್ನು ತಂದೆಯ ಸ್ವತ್ತು (ಆಸ್ತಿ) ಎಂದು ತಿಳಿದು ಆತ್ಮೀಯವಾಗಿ ತಯಾರಾಗಿದ್ದೇನೆ.

3. ನನ್ನ ಸಂಸ್ಕಾರ ಕೂಡ ಬದಲಾಗುವಷ್ಟು ನಾನು ಬಲಿಯಾಗಿದ್ದೇನೆ.

4. ನಾನು ನನ್ನನ್ನು ಮತ್ತು ಯಾರ ಸೇವೆಗಾಗಿ ನಾನು ನಿಮಿತ್ತವಾಗಿದ್ದೇನೆಯೋ (ತನು, ಮನ, ಜಿಜ್ಞಾಸು, ಸೇವಾಕೇಂದ್ರ, ಮತ್ತು ಯಾವ ಸ್ಥೂಲ ವಸ್ತುವನ್ನಾದರೂ) ನಿಮಿತ್ತವಾಗಿ ಭಾವಿಸಿ ಅನಾಸಕ್ತವಾಗಿ ತಯಾರಾಗಿದ್ದೇನೆ.

5. ನಾನು ಸಂಕಲ್ಪ, ವಾಣಿ, ಕರ್ಮ ಮತ್ತು ಸಂಬಂಧಗಳಲ್ಲಿ ಹಗುರವಾಗಿರುವ ಪರಿಶ್ತಾ ಆಗಿದ್ದೇನೆ.

6. ನಾನು ಯಾವ ಪರಿಸ್ಥಿತಿ ಎದುರಿಗೆ ಬಂದರೂ ಒಂದು ಕ್ಷಣದಲ್ಲಿಯೇ ನಿರ್ಣಯಿಸಬಲ್ಲ ಸಂಪೂರ್ಣ ಸ್ವರೂಪ.

7. ನಾನು ನನ್ನ ಸಂಕಲ್ಪಗಳ ಮೇಲೆ ನಿಯಂತ್ರಣವನ್ನಿಟ್ಟು (ಬ್ರೇಕ್) ಮತ್ತು ಸಂಕಲ್ಪಗಳನ್ನು ಸಮಾವೇಶಗೊಳಿಸಿ ಬೇರೆಯವರ ಸಂಕಲ್ಪಗಳನ್ನು ತಿಳಿಯಬಲ್ಲೆನು.

8. ನಾನು ಪೂರ್ಣ ದೈವಿ ಪರಿವಾರದೊಂದಿಗೆ ಮತ್ತು ಸರ್ವಾತ್ಮರೊಂದಿಗೆ ಸಂಬಂಧವನ್ನಟ್ಟುಕೊಂಡ ಮತ್ತು ಸಹಯೋಗಿಯಾಗಿರುವ ವಿಶ್ವ ಮಹಾರಾಜನು.

9. ನಾನು ಎಲ್ಲರಿಂದ ಸ್ನೇಹ ಪುಷ್ಪಗಳಿಗೆ ಪಾತ್ರವಾಗಿ ದ್ವಾಪರದಲ್ಲಿ ಪೂಜಾ ಪುಷ್ಪಗಳಿಗೆ ಅರ್ಹನಾಗಿದ್ದೇನೆ.

10. ನಾನು ಈ ಕಲಿಯುಗೀ ಪರ್ವತವನ್ನು ಎತ್ತಲು ನನ್ನ ಸಂಪೂರ್ಣ ಸಹಯೋಗವನ್ನು ಕೊಟ್ಟಿದ್ದೇನೆ.

11. ನಾನು ಸಂಘಟನೆಯಲ್ಲಿ ಸೇವೆಯನ್ನು ಮಾಡಿ ಕಡಿಮೆ ಶ್ರಮದಿಂದ ಹೆಚ್ಚು ಸಫಲತೆಯನ್ನು ಪಡೆದಿದ್ದೇನೆ.

12. ನಾನು ನನ್ನ ಯೋಗ್ಯತೆಗಳಿಂದ ಬೇರೆಯವರನ್ನು ತಂದೆಗೆ ಸಮೀಪ ಬರುವ ಯೋಗ್ಯರನ್ನಾಗಿ ತಯಾರು ಮಾಡಿದ್ದೇನೆ.

13. ನಾನು ಸರ್ವ ಯೋಗ್ಯತೆಗಳಿಂದ ಗುಣಮಟ್ಟದವರನ್ನು ತಯಾರು ಮಾಡಿದ್ದೇನೆ.